ಭಾವಕೋಶವನ್ನು ತುಂಬಿಕೊಳ್ಳುತ್ತಾ... ಸಂತೆಯ ದಿನಗಳಲ್ಲಿ ತನ್ನ ತಂದೆಯೊಂದಿಗೆ ದೂರದ ದಾರಿ ನಡೆನಡೆದು, ಸಂತೆಯ ವ್ಯಾಪಾರಸಾಪಾರ, ಅಲ್ಲಿಯ ತಿಂಡಿ ತಿನಿಸುಗಳ ಆಕರ್ಷಣೆಗೆ ಮೈಸೋಲುತ್ತಾ, ಮನಸೋಲುತ್ತಾ ಸಾಗಿದ ಆ ದಿನಗಳಲ್ಲಿ ಅವರ ಅಕ್ಷರಮೋಹಕ್ಕೊಂದು ಆಯಾಮ ದೊರಕಿತು. ಸಂತೆಯಲ್ಲಿ ತ್ರಿವೇಣಿಯವರ 'ಸಮಸ್ಯೆಯ ಮಗು' ಎಂಬ ಕಥಾಸಂಕಲವನ್ನು ತೆಗೆಸಿಕೊಂಡು ಓದುತ್ತಾ ಮತ್ತಷ್ಟು ಓದಿನ ಹಸಿವು ಹೆಚ್ಚಿಸಿಕೊಂಡ ಅವರ ಕಣ್ಣುಗಳು ರವೀಂದ್ರನಾಥ ಟ್ಯಾಗೋರರ ಅನುವಾದಿತ ಕತೆಗಳತ್ತ ಹೊರಳಿದವು. ಮನೆಗೆ ತಂದ ದಿನಸಿ ಕಟ್ಟಿದ ಕಾಗದಗಳ ಅಕ್ಷರಗಳನ್ನು ಬಿಡದೇ ಓದುವ ಉಮೇದು ಸಾಹಿತ್ಯಕ್ಕೆ ಮತ್ತಷ್ಟು ನಿಕಟವಾಗಿಸಿತು. ತಂದೆ ಇಷ್ಟಪಟ್ಟು ಕೊಂಡು ಮನೆಯಲ್ಲಿ ತಂದಿಟ್ಟುಕೊಂಡಿದ್ದ ಕೆಲವು ಪುಸ್ತಕಗಳು, ಎನ್. ನರಸಿಂಹಯ್ಯನವರ ಪತ್ತೇದಾರಿ ಕಾದಂಬರಿಗಳು, ಬೀಚಿಯವರ ಕೃತಿಗಳು ಅವರ ಅಕ್ಷರದ ಹಸಿವಿಗೆ ಆಹಾರವಾದವು. ಓದಿನ ಜೊತೆ ಜೊತೆಗೆ ಮೆಲ್ಲಗೆ ಬರವಣಿಗೆಯೂ ಆರಂಭವಾಯಿತು– ಮೊಗ್ಗೊಂದು ಹೂವಾಗುವಷ್ಟೆ ಸರಳವಾಗಿ, ಸಹಜವಾಗಿ, ಸುಂದರವಾಗಿ!

ಆ ಕಾಲದಲ್ಲಿ ತೀರ್ಥಹಳ್ಳಿಯಲ್ಲಿ ಹನ್ನೊಂದನೇ ತರಗತಿಗಿಂತ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದ ಕಾರಣ ವಿದ್ಯಾಭ್ಯಾಸ ಅಲ್ಲಿಗೆ ಮೊಟಕಾಯಿತು. ಆಗಲೆ ಪಾಂಡುರಂಗ ಉಡುಪರೊಡನೆ ವಿವಾಹವಾಗಿ ಶಿವಮೊಗ್ಗ ಸೇರಿದರು. ಉಡುಪರು ಕಾಲೇಜಿನಲ್ಲಿ ಸಾಹಿತ್ಯ ಬೋಧಿಸುವ ಉಪನ್ಯಾಸಕರು. ಮನೆಗೆ ಹೊಸ ಹೊಸ ಪುಸ್ತಕಗಳು ಬರುತ್ತಿದ್ದವು. ಹೀಗೆ ಓದಲು ಬರೆಯಲು ವೇದಿಕೆಯೊಂದು ಸಿದ್ಧವಾಗುತ್ತಿತ್ತು. ಆಗ ಬರೆದ ಕತೆಯನ್ನು ಪತ್ರಿಕೆಗೆ ಕಳುಹಿಸುವ ತರಾತುರಿಯಲ್ಲಿ ಹಾಳೆಯ ಎರಡೂ ಬದಿ ಬರೆದು ಕಳಿಸಿದ್ದೂ ಇದೆ. ನಂತರ ಆ ಕುರಿತು ತಿಳಿವಳಿಕೆ ಬಂದು ಸರಿಯಾಗಿ ಬರೆದು ಕಳಿಸಿದ ಕತೆಯೊಂದು ಮೊದಲ ಬಾರಿಗೆ 'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಯಿತು. ಈ ಕತೆ ಅವರಲ್ಲಿ ಹೆಚ್ಚಿನ ಆತ್ಮವಿಶ್ವಾಸ ತುಂಬಿತು; ಮತ್ತಷ್ಟು ಬರವಣಿಗೆಗೆ ಪ್ರೇರೇಪಿಸಿತು. ಇಪ್ಪತ್ತಕ್ಕೂ ಹೆಚ್ಚು ಕಥಾಸಂಗ್ರಹಗಳು, ಮೂರು ನಾಟಕಗಳು, ಕೆಲವು ಕಾದಂಬರಿಗಳನ್ನು ಪ್ರಕಟಿಸುತ್ತ, ತಮ್ಮ ಬರಹಗಳನ್ನು ನಿರಂತರವಾಗಿ ಪತ್ರಿಕೆಗಳಲ್ಲಿ ಪ್ರಕಟಿಸುತ್ತ, ಓದುಗರನ್ನು ಸಂಪಾದಿಸುತ್ತ ಬಂದ ಲೇಖಕಿ ವಸುಮತಿ ಉಡುಪ. ಕೀರ್ತಿಶ್ರೀ, ಜ್ಯೋತಿಶ್ರೀ ಮತ್ತು ರಾಘವೇಂದ್ರ ಉಡುಪರ ಮಮತೆಯ ಅಮ್ಮ. ಗೃಹಿಣಿ ಕೀರ್ತಿಶ್ರೀ ಸ್ಟೇಟ್ ಬ್ಯಾಂಕಿನ ಉದ್ಯೋಗಿಯಾದರೆ, ಜ್ಯೋತಿಶ್ರೀ ಗೃಹಿಣಿ, ಮಗ ರಾಘವೇಂದ್ರ ಸಾಫ್ಟ್‌ವೇರ್ ಕಂಪೆನಿಯೊಂದರ ಉದ್ಯೋಗಿ. ಹೆಣ್ಣುಮಕ್ಕಳು, ಅಳಿಯಂದಿರು, ಮಗ, ಸೊಸೆ, ಮೊಮ್ಮಕ್ಕಳೊಂದಿಗೆ ಸಂತೃಪ್ತ ಕುಟುಂಬದೊಡತಿ. ಲವಲವಿಕೆಯ ಬರಹಗಳಿಂದ ಓದುಗ ಸಮೂಹವನ್ನು ತಮ್ಮತ್ತ ಸೆಳೆದುಕೊಂಡ ಈ ಲೇಖಕಿಯ ಬದುಕು, ಬರಹ, ಚಿಂತನೆಗಳ ಮಿಂಚುಗಳು ಇಲ್ಲಿವೆ.

- ತೀರ್ಥಹಳ್ಳಿ ಪೇಟೆಯ ಚಿಕ್ಕಜ್ಜನ ಮನೆ ವಾಸದ ನೆನಪುಗಳಲ್ಲಿ ನಿಮಗೆ ತುಂಬಾ ಪ್ರಿಯವಾದದ್ದು ಯಾವುದು?

ರಾಮೇಶ್ವರ ದೇವಸ್ಥಾನಕ್ಕೆ ಹತ್ತಿರದಲ್ಲಿದ್ದ ಮನೆ. ಉದ್ದಾನುದ್ದಕ್ಕೆ ರೈಲ್ವೆ ಬೋಗಿಯ ಹಾಗಿತ್ತು. ಈ ಬೋಗಿಯಲ್ಲಿ ಮೂರು ಮನೆಗಳು. ಮನೆಯ ಪಕ್ಕದಲ್ಲಿ ಇಳಿಜಾರಿನ ರಸ್ತೆ. ನಮ್ಮ ವಾಸ್ತವ್ಯಕ್ಕೆ ಒಂದು ಮನೆ ಉಳಿಸಿಕೊಂಡು ಉಳಿದದ್ದನ್ನ ಬಾಡಿಗೆಗೆ ಕೊಟ್ಟಿದ್ದರು. ತೀರ್ಥಹಳ್ಳಿಯ ನಮ್ಮ ಮನೆ ಅಂದರೆ ಒಂದು ಛತ್ರ ಇದ್ದ ಹಾಗೆ. ನಾವು ಸೋದರ ಸೋದರಿಯರೊಡನೆ ನಮ್ಮ ದೊಡ್ಡಪ್ಪನ